ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 24-10-2025 ರಂದು ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಎಸ್ ಎನ್ ವಕೀಲರಿಂದಃ**

ನಾನು Deplome in Civil Engineering ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುತ್ತದೆ. ನಾನು ಸಲ್ಲಿಸಿರುವ ಪಿರ್ಯಾದಿಯಲ್ಲಿರುವ ವಿಷಯಗಳು ನನಗೆ ಗೊತ್ತಿದ್ದು ಹಾಗೂ ಸರಿ ಇರುತ್ತವೆ. ನನ್ನ ಮತ್ತು 1 ನೇ ಆರೋಪಿಯೊಂದಿಗೆ ದಿಃ 01-05-2015 ರಲ್ಲಿ ಮದುವೆ ಆಗಿರುತ್ತದೆ. ಮದುವೆ ಆದ ನಂತರ 3-4 ತಿಂಗಳು 1 ನೇ ಆರೋಪಿಯಾದ ನನ್ನ ಗಂಡನೊಂದಿಗೆ ವಾಸವಿದ್ದೆನು. ನಂತರ ಸೊರಬದಲ್ಲಿ ನನ್ನ ಗಂಡನ ಜೊತೆ ವಾಸವಿದ್ದೆನು.

2. ನನ್ನ ಮತ್ತು 1 ನೇ ಆರೋಪಿಯ ಮದುವೆ ಕಾಲಕ್ಕೆ ನನ್ನ ತಂದೆ ತಾಯಿ 11 ತೋಲೆ ಬಂಗಾರ ಮತ್ತು 1 ಕೆ ಜಿ ಬೆಳ್ಳಿ ವರದಕ್ಷಿಣೆಯಾಗಿ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಮದುವೆ ಕಾಲಕ್ಕೆ 1 ನೇ ಆರೋಪಿ 6 ತೊಲೆ ಬಂಗಾರದ ನೆಕ್ಲೇಸ್, 2 ತೊಲೆ ಕಿ ವಿ ಓಲೆ, ಒಂದು ತೊಲೆ ಇನ್ನೊಂದು ಜೊತೆ ಕಿವಿ ಒಲೆ , 3 ತೊಲೆ ಬಂಗಾರದ ತಾಳಿ ಚೈನ್ , ಒಂದು ಜೊತೆ ಕಿವಿ ಒಲೆ , ಒಂದು ಬೆಳ್ಳಿ ಯ ಸೊಂಟದ ಪಟ್ಟಿ, ಬೆಳ್ಳಿಯ ಕಳಸ, ಬೆಳ್ಳಿಯ ಪ್ಲೆಟ್ ಒಂದು ಬೆಳ್ಳಿಯ ತಂಬಿಗೆಯನ್ನು 1 ನೇ ಆರೋಪಿ ವರದಕ್ಷಿಣೆ ನೀಡಬೇಕು ಎಂದು ಕೇಳಿದ್ದರಿಂದ ನೀಡಿರುತ್ತೇವೆ. 6 ತೊಲೆ ಬಂಗಾರದ ನೆಕ್ಲೇಸ್, 2 ತೊಲೆ ಕಿ ವಿ ಓಲೆ, ಒಂದು ತೊಲೆ ಇನ್ನೊಂದು ಜೊತೆ ಕಿವಿ ಒಲೆ , 3 ತೊಲೆ ಬಂಗಾರದ ತಾಳಿ ಚೈನ್ , ಒಂದು ಜೊತೆ ಕಿವಿ ಒಲೆ , ಒಂದು ಬೆಳ್ಳಿ ಯ ಸೊಂಟದ ಪಟ್ಟಿ, ಬೆಳ್ಳಿಯ ಕಳಸ, ಬೆಳ್ಳಿಯ ಪ್ಲೆಟ್ ಒಂದು ಬೆಳ್ಳಿಯ ತಂಬಿಗೆಯನ್ನು ನನ್ನ ತಂದೆ ನನ್ನ ಮದುವೆ ಕಾಲಕ್ಕೆ ಉಡುಗೊರೆಯಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಬೆಳ್ಳಿ ಮತ್ತು ಬಂಗಾರವನ್ನು ವರದಕ್ಷಿಣೆಯಾಗಿ ನೀಡಬೇಕು ಎಂದಿದ್ದರಿಂದ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ವರದಕ್ಷಿಣೆ ಕೇಳಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಆರೋಪಿ ಸದರಿ ವರದಕ್ಷಿಣೆಯನ್ನು ಪಡೆದ ಬಗ್ಗೆ ಭಾವಚಿತ್ರ ಮತ್ತು ಸಿಡಿಗಳು ಇರುತ್ತವೆ. ಸದರಿ ಭಾವಚಿತ್ರಗಳಲ್ಲಿ ನೀಡಿದ ಆಭರಣಗಳು ನನ್ನ ಮದುವೆ ಕಾಲಕ್ಕೆ ಸಾಂಪ್ರದಾಯಿಕವಾಗಿ ನೀಡಿದ ಆಭರಣಗಳು ಎಂದರೆ ಸರಿಯಲ್ಲ. ಆರೋಪಿತರು ನಮ್ಮಿಂದ ಯಾವುದೇ ವರದಕ್ಷಿಣೆಯನ್ನು ಕೇಳಿಲ್ಲ ಹಾಗೂ ಪಡೆದಿಲ್ಲ ಎಂದರೆ ಸರಿಯಲ್ಲ.

3. ದಿಃ 15-08-2016 ರಂದು ಆರೋಪಿತರು ನನಗೆ ಬಡಿಗೆಯಿಂದ ಹೊಡೆದ ಬಗ್ಗೆ ಯಾವುದೇ ಪೊಲೀಸ ದೂರು ನೀಡಿಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡನ ಮನೆಯ ಮರ್ಯಾದೆಯನ್ನು

ತೆಗೆಯಬಾರದು ಎಂದು ನಾನು ಪೋಲೀಸ ದೂರು ನೀಡಿಲ್ಲ. ದಿಃ 15-08-2016 ರಂದು ಆರೋಪಿತರು ನನಗೆ ಬಡಿಗೆಯಿಂದ ಹೊಡೆದ ಬಗ್ಗೆ ನಾನು ಯಾವುದೇ ಮಹಿಳಾ ರಕ್ಷಣಾ ಸಂಘಕ್ಕೆ ದೂರು ನೀಡಿಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡನ ಮನೆಯ ಮರ್ಯಾದೆಯನ್ನು ತೆಗೆಯಬಾರದು ಎಂದು ನಾನು ಪೋಲೀಸ ದೂರು ನೀಡಿಲ್ಲ.

4. ದಿಃ 15-08-2016 ರಂದು ಆರೋಪಿತರು ನನಗೆ ಬಡಿಗೆಯಿಂದ ಹೊಡೆದ ಸಂಬಂದ ನಾನು ಆ ದಿನ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ಸಾಕ್ಷಿಯು ಮುಂದುವರೆದು 2 ದಿನಗಳ ನಂತರ ನಾನು ಚಿಕಿತ್ಸೆಯನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಚಿಕಿತ್ಸೆ ಪಡೆದ ಬಗ್ಗೆ ನಾನು ಯಾವುದೇ ದಾಖಲೆಗಳು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಅದು ಸಣ್ಣ ಆಸ್ಪತ್ರೆ ಆಗಿದ್ದು ಅಲ್ಲಿ ಯಾವುದೇ ದಾಖಲೆಗಳನ್ನು ನೀಡಿಲ್ಲ ಎಂದು ನುಡಿಯುತ್ತಾರೆ.

5. ಸಾಮಾನ್ಯವಾಗಿ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದರು ವೈದ್ಯರು ಚಿಕಿತ್ಸೆಗೆ ಸಂಬಂದಪಟ್ಟಂತೆ ಪ್ರಿಸ್ಕ್ರಿಪ್ಷನ್ ಬರೆದುಕೊಡುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಮೂಳೆ ಮುರಿತವಾದರೆ ಹೆಚ್ಚಿನ ಚಿಕಿತ್ಸೆಗಾಗಿ ರೆಫರ್ ಮಾಡುತ್ತಾರೆ ಎಂದರೆ ಸರಿ. ನಾನು ಸದರಿ ಆಸ್ಪತ್ರೆಯಲ್ಲಿ ಒಳರೋಗಿ ಚಿಕಿತ್ಸೆ ಪಡೆದಿಲ್ಲ ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ.

6. ದಿಃ 15-08-2016 ರಂದು ಆರೋಪಿತರು ನನ್ನನ್ನು ತವರು ಮನೆಗೆ ಬಿಟ್ಟು ಹೋಗಿರುತ್ತಾರೆ ಎಂದು ನಾನು ಹೇಳಿಲ್ಲ.

7. ನಾನು ಮತ್ತು 1 ನೇ ಆರೋಪಿ ಸೊರಬದಲ್ಲಿ ಇದ್ದಾಗ ನಾವಿಬ್ಬರೇ ಇದ್ದೆವು.

8. ದಿಃ 24-06-2017 ರಂದು 1 ನೇ ಆರೋಪಿಗೆ ರೂ.18,500/- ಬೆಲೆಯ ಮೈಕ್ರೊ ಮ್ಯಾಕ್ಸ ಟಿವಿಯನ್ನು ಕೊಡಿಸಿರುವುದಿಲ್ಲ ಎಂದರೆ ಸರಿಯಲ್ಲ.

9. 1 ನೇ ಆರೋಪಿ ನನ್ನ ತಂದೆಯ ಬಳಿ ಹೆಚ್ಚಿನ ವರದಕ್ಷಿಣೆ ಕೇಳಿದಾಗ ನನ್ನ ತಂದೆ ನನ್ನ ಬಳಿ ಹಣ ಇಲ್ಲ ಎಂದು ಹೇಳಿದಾಗ 1 ನೇ ಆರೋಪಿ ನನ್ನ ತಂದೆಯ ಎ ಟಿ ಎಂ ಕಾರ್ಡ ಕಿತ್ತುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

10. ದಿಃ 16-06-2016 ರಂ ದು 1 ನೇ ಆರೋಪಿಗೆ ಮಾರುತಿ ಸೂಜೂಕಿ A star Car No KA 04 MH 8303 ವಾಹನವನ್ನು 1 ನೇ ಆರೋಪಿಗೆ ವರದಕ್ಷಿಣೆಯಾಗಿ ನೀಡಿಲ್ಲ ಎಂದರೆ ಸರಿಯಲ್ಲ.

11. 1 ನೇ ಆರೋಪಿಗೆ ನನ್ನ ತಂದೆಯು ಅವರ ಖಾತೆಯಿಂದ ರೂ.2,35,000/- ಹಣವನ್ನು ವರದಕ್ಷಿಣೆಯಾಗಿ ನೀಡಿಲ್ಲ ಎಂದರೆ ಸರಿಯಲ್ಲ.



12. ದಿಃ 08-11-2020 ರಂದು ಸಂಜೆ 5-30 ಸಮಯಕ್ಕೆ ಆರೋಪಿತರು ನಮ್ಮ ಮನೆಗೆ ಬಂದು 1 ನೇ ಆರೋಪಿಗೆ ವಿಚ್ಚೆಧನೆ ನಿಡುವಂತೆ ಗಲಾಟೆ ಮಾಡಿಲ್ಲ ಮತ್ತು ಜೀವಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ದಿಃ 08-11-2020 ರಂದು ನಾನು ಸದರಿ ಗಲಾಟೆಗೆ ಸಂಬಂದಿಸಿದಂತೆ ಆರೋಪಿತರ ವಿರುದ್ಧ ದೂರನ್ನು ಆ ದಿನ ನೀಡಿಲ್ಲ. ಸಾಕ್ಷಿಯು

ಮುಂದುವರೆದು ದಿಃ 09-11-2020 ರಂದು ಪೋಲೀಸ ಠಾಣೆಯಲ್ಲಿ ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪೋಲೀಸ ಪಿರ್ಯಾದಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ.

13. ನಿ.ಸಿ-19 ರಿಂದ 21 GST bill ಗಳಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಗ GST bill ಗಳು ಇರಲಿಲ್ಲ ಎಂದು ನುಡಿಯುತ್ತಾರೆ. ನಿ.ಸಿ-19 ರಿಂದ 21 ನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಸಿ-15 ನ್ನು 1 ನೇ ಆರೋಪಿ ತನ್ನ ಸ್ವಂತ ದುಡಿಮೆಯಿಂದ ಖರೀದಿ ಮಾಡಿದ ಕಾರು ಎಂದರೆ ಸರಿಯಲ್ಲ. ಸಾಕ್ಷಿಯು ಮಂದುವರೆದು ನನ್ನ ಮತ್ತು 1 ನೇ ಆರೋಪಿಯ ಮದುವೆ ಆದ ನಂತರ ಹೆಚ್ಚಿನ ವರದಕ್ಷಿಣೆಗಾಗಿ ಕಾರು ಕೊಡಿಸಬೇಕು ಎಂದು ಹೇಳಿದ್ದರಿಂದ ನನ್ನ ತಂದೆ 1 ನೇ ಆರೋಪಿಗೆ ಸದರಿ ಕಾರನ್ನು ಕೊಡಿಸಿರುತ್ತಾರೆ ಎಂದು ನುಡಿಯುತ್ತಾರೆ.

14. ನಿ.ಸಿ-7 ಮತ್ತು 8 ರ Account statement ಗಳು ನನ್ನ ಮತ್ತು 1 ನೇ ಆರೋಪಿ ಚೆನ್ನಾಗಿದ್ದಾಗಿ ವ್ಯವಹರಿಸಿದ ದಾಖಲೆಗಳು ಆಗಿರುತ್ತವೆ ಎಂದರೆ ಸರಿ. ಸಾಕ್ಷಿಯು ಮಂದುವರೆದು 1 ನೇ ಆರೋಪಿ ಹೆಚ್ಚಿನ ವರದಕ್ಷಿಣೆಗಾಗಿ ಬೇಡಿಕೆ ಇಟ್ಟಾಗ ಹೆಚ್ಚಿನ ವರದಕ್ಷಿಣೆ ನೀಡಿದ ಬಗ್ಗೆ ದಾಖಲೆ ಆಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಆರೋಪಿ ನನ್ನ ತಂದೆಯ ಖಾತೆಗೆ ಸಾಕಷ್ಟು ಹಣವನ್ನು ಜಮಾ ಮಾಡಿರುತ್ತಾರೆ ಎಂದರೆ ಸರಿಯಲ್ಲ.

15. ನವೀನ್ ಡಿ ನನ್ನ ಸಹೋದರ. ಸದರಿ ನನ್ನ ಸಹೊದರನ ಖಾತೆಗೂ ಸಹ 1 ನೇ ಆರೋಪಿ ಸಾಕಷ್ಟು ಹಣವನ್ನು ಜಮಾ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 1 ನೇ ಆರೋಪಿಗೆ ಸಂಬಂದಿಸಿದಂತೆ ಕಾರ ಸರ್ವಿಸ್ ಮಾಡಿಸಲು ಹಾಗೂ ಆತನ ಕೆಲಸಕ್ಕೆ ಸಂಬದಿಸಿದಂತೆ ಸದರಿ ಹಣ ಜಮಾ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

16. ಜನವರಿ-2020 ರಲ್ಲಿ 1 ನೇ ಆರೋಪಿ ನನ್ನನ್ನು ತವರು ಮನೆಗೆ ಬಿಟ್ಟು ಹೋಗಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.



17. ದಿಃ 08-11-2020 ರಂದು ಆರೋಪಿತರು ನಮ್ಮ ಮನೆಗೆ ಬಂದಿಲ್ಲ ಮತ್ತು ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

18. ದಿಃ 30-11-2017 ರಂದು 1 ನೇ ಆರೋಪಿಯ ಖಾತೆಯಿಂದ ನನ್ನ ತಂದೆಯ ಖಾತೆಗೆ ರೂ.2,75,000/- ಜಮಾ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಬಗ್ಗೆ bank statement ನಲ್ಲಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

19. ಆರೋಪಿತರು ನನಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿಲ್ಲ ಎಂದರೆ ಸರಿಯಲ್ಲ, ಆರೋಪಿತರು ನನಗೆ ಹೊಡೆ ಬಡೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

20. 1 ನೇ ಆರೋಪಿ ದಿಃ 07-10-2020 ರಲ್ಲಿ ಸೊರಬ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇಧನೆ ಕೊರಿ MC ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ MC ನೋಟಿಸ ಜಾರಿ ಆದ ನಂತರ ದಿಃ 09-11-2020 ರಂದು ಈ ನ್ಯಾಯಾಲಯದಲ್ಲಿ ಆರೋಪಿಗಳ ವಿರುದ್ಧ ಸುಳ್ಳು ಖಾಸಗಿ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

21. ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಪಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿ.ಪಿ-9 ರಿಂದ 16 ಭಾವಚಿತ್ರಗಳಿಗೂ ಹಾಗೂ ಸಿಡಿಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**